# ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ
## ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಾಲಯ
## ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ

## ಪಿ.ಎಂ.ಕಿಸಾನ್ ಯೋಜನೆಯಡಿ ಇ-ಕೆವೈಸಿ ವಿಧಾನಗಳು ಮತ್ತು ಪ್ರಕ್ರಿಯ ಕುರಿತು ಟಿಪ್ಪಣಿ

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯನ್ನು ಫೆಬ್ರವರಿ 2019 ರಿಂದ ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತ ಕುಟುಂಬಕ್ಕೆ ಆರ್ಥಿಕ ನೆರವು ನೀಡಲು ದೇಶದಲ್ಲಿ ಜಾರಿಗೊಳಿಸಲಾಗಿದೆ. ಯೋಜನೆಯಡಿ ವಾರ್ಷಿಕ ರೂ.6000/-ಗಳ ಆರ್ಥಿಕ ನೆರವನ್ನು ಮೂರು ಕಂತುಗಳಲ್ಲಿ ಅರ್ಹ ರೈತರ ಬ್ಯಾಂಕ್ ಖಾತೆಗಳಿಗೆ ನೇರ ನಗದು ಮೂಲಕ ವರ್ಗಾವಣೆ ನೀಡಲಾಗುತ್ತಿದೆ.

### ಏಕೆ ಇ-ಕೆವೈಸಿ?

ಪಿ.ಎಂ.ಕಿಸಾನ್ ಯೋಜನೆಯ ಪ್ರಯೋಜನವು ಯಾವುದೇ ಮಧ್ಯವರ್ತಿಗಳಿಲ್ಲದೆ ಅವರ ಆಧಾರ್ ಜೋಡಿತ ಬ್ಯಾಂಕ್ ಖಾತೆಗಳಲ್ಲಿ ಅರ್ಹ ಫಲಾನುಭವಿಗಳಿಗೆ ತಲುಪುವುದನ್ನು ಖಚಿತಪಡಿಸಿಕೊಳ್ಳಲು.

### ಇ-ಕೆವೈಸಿ ಯ ವಿಧಾನಗಳು

ಪಿ.ಎಂ.ಕಿಸಾನ್ ಯೋಜನೆಯಡಿ ರೈತರಿಗೆ eKYC ಮಾಡಿಸಲು ಕೆಳಗಿನ ಮೂರು ವಿಧಾನಗಳು ಲಭ್ಯವಿರುತ್ತದೆ:

1. OTP ಆಧಾರಿತ e-KYC (ಪಿ.ಎಂ.ಕಿಸಾನ್ ಪೋರ್ಟಲ್ ಮತ್ತು ಮೊಬೈಲ್ ಅಪ್ಲಿಕೇಶನ್‌ನಲ್ಲಿ ಲಭ್ಯವಿದೆ).
2. ಬಯೋಮೆಟ್ರಿಕ್ ಆಧಾರಿತ e-KYC (ನಾಗರೀಕ ಸೇವಾ ಕೇಂದ್ರಗಳು) ಮತ್ತು ರಾಜ್ಯ ಸೇವಾ ಕೇಂದ್ರ (SSK ಗಳು) ನಲ್ಲಿ ಲಭ್ಯವಿದೆ).
3. ಮುಖ ಚರ್ಯೆ ಆಧಾರಿತ e-KYC (Face Recognition) (ಲಕ್ಷಾಂತರ ರೈತರು ಬಳಸುವ ಪಿ.ಎಂ. ಕಿಸಾನ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ಲಭ್ಯವಿದೆ)

### OTP ಆಧಾರಿತ e-KYC

OTP ಆಧಾರಿತ eKYC ಅನ್ನು ಕಾರ್ಯಗತಗೊಳಿಸಲು, ರೈತರು ಆಧಾರ್ ಲಿಂಕ್ ಮಾಡಿದ ಸಕ್ರಿಯ ಮೊಬೈಲ್ ಸಂಖ್ಯೆಯನ್ನು ಹೊಂದಿರಬೇಕು. ಇದಕ್ಕಾಗಿ ಈ ಕೆಳಗೆ ನೀಡಿರುವ ಹಂತಗಳನ್ನು ಅನುಸರಿಸಿ:

i.ಕೇಂದ್ರ ಸರ್ಕಾರದ PM-KISAN ಪೋರ್ಟಲ್‌ಗೆ ಭೇಟಿ ನೀಡುವುದು (https://pmkisan.gov.in/)
ii. e-KYC ಮೇಲೆ ಕ್ಲಿಕ್ ಮಾಡಿ (ವೆಬ್‌ಸೈಟ್‌ನ ಮೇಲಿನ ಬಲ ಮೂಲೆಯಲ್ಲಿ)
iii. ನಿಮ್ಮ ಆಧಾರ್ ಸಂಖ್ಯೆಯನ್ನು ನಮೂದಿಸಿದ ನಂತರ OTP ಸಲ್ಲಿಸಿ ನಿಮ್ಮ eKYC ಅನ್ನು ಪೂರ್ಣಗೊಳಿಸಿ.

## ಬಯೋಮೆಟ್ರಿಕ್ ಆಧಾರಿತ e-KYC

ರೈತರ ಮನೆ ಬಾಗಿಲಿಗೆ/ ನೆರೆಹೊರೆಯಲ್ಲಿ ಈ ಸೌಲಭ್ಯವನ್ನುಒದಗಿಸಲು 4 ಲಕ್ಷಕ್ಕೂ ಹೆಚ್ಚು ನಾಗರೀಕ ಸೇವಾ ಕೇಂದ್ರಗಳು ಮತ್ತು ರಾಜ್ಯ ಸೇವಾ ಕೇಂದ್ರಗಳಿಗೆ ಒದಗಿಸಲಾಗಿದೆ. ಇದಕ್ಕಾಗಿ ಈ ಕೆಳಗೆ ನೀಡಿರುವ ಹಂತಗಳನ್ನು ಅನುಸರಿಸಿ:

i. ನಿಮ್ಮ ಆಧಾರ್ ಕಾರ್ಡ್ ಮತ್ತು ಆಧಾರ್ ಲಿಂಕ್ ಮಾಡಲಾದ ಮೊಬೈಲ್ ಸಂಖ್ಯೆಯೊಂದಿಗೆ ನಿಮ್ಮ ಹತ್ತಿರದ ನಾಗರೀಕ ಸೇವಾ ಕೇಂದ್ರ/ ರಾಜ್ಯ ಸೇವಾ ಕೇಂದ್ರಗಳಿಗೆ ಭೇಟಿ ನೀಡುವುದು.
ii. ನಾಗರೀಕ ಸೇವಾ ಕೇಂದ್ರ/ ರಾಜ್ಯ ಸೇವಾ ಕೇಂದ್ರಗಳ ಆಪರೇಟರ್ ಗಳು ಆಧಾರ್ ಆಧಾರಿತ ಬಯೋಮೆಟ್ರಿಕ್ ದೃಢೀಕರಣ ಮಾಡಲು ನೆರವು ನೀಡುತ್ತಾರೆ.

**ಸೂಚನೆ:**

i. https://locator.csccloud.in - ನಲ್ಲಿ ಹತ್ತಿರದಲ್ಲಿ ನಾಗರೀಕ ಸೇವಾ ಕೇಂದ್ರಗಳನ್ನು ಗುರುತಿಸಬಹುದು.
ii. eKYC ಗಾಗಿ ರೂ.15 ಶುಲ್ಕ ನಿಗದಿಪಡಿಸಲಾಗಿದೆ.

## ಮುಖ ಚರ್ಯೆ ಆಧಾರಿತ e-KYC (Face Recognition)

ಇ-ಕೆವೈಸಿಯನ್ನು ರೈತರು ತಮ್ಮ ಸ್ವಂತ ಅನುಕೂಲಕ್ಕೆ ಅನುಗುಣವಾಗಿ ಮೊಬೈಲ್ ಗಳಿಂದ ಮಾಡಬಹುದು. ಇದು e KYC ಮಾಡುವ ಅತ್ಯಂತ ನವೀನ ಮತ್ತು ಸಮಸ್ಯೆ ರಹಿತ ಮಾರ್ಗವಾಗಿದೆ. ಹಂತಗಳನ್ನು ಈ ಕೆಳಗೆ ನೀಡಲಾಗಿದೆ:

i. Google Play Store ನಿಂದ PM-KISAN ಮೊಬೈಲ್ ಅಪ್ಲಿಕೇಶನ್ ಮತ್ತು ಆಧಾರ್ ಫೇಸ್ RD ಅಪ್ಲಿಕೇಶನ್ ಅನ್ನು ಡೌನ್‌ಲೋಡ್ ಮಾಡಿರಿ.
ii.ಅಪ್ಲಿಕೇಶನ್ ತೆರೆಯಿರಿ ಮತ್ತು ನಿಮ್ಮ PM-KISAN ನೋಂದಾಯಿತ ಮೊಬೈಲ್ ಸಂಖ್ಯೆಯ ಮೂಲಕ ಲಾಗಿನ್ ಮಾಡಿ
iii.ಫಲಾನುಭವಿ ಸ್ಥಿತಿ ಪುಟಕ್ಕೆ ಹೋಗಿ.
iv. E-KYC ಸ್ಥಿತಿ "ಇಲ್ಲ" ಆಗಿದ್ದರೆ, e-KYC ಮೇಲೆ ಕ್ಲಿಕ್ ಮಾಡಿ, ನಂತರ ನಿಮ್ಮ ಆಧಾರ್ ಸಂಖ್ಯೆಯನ್ನು ನಮೂದಿಸಿ ಮತ್ತು ನಿಮ್ಮ ಮುಖವನ್ನು ಸ್ಕ್ಯಾನ್ ಮಾಡಲು ನಿಮ್ಮ ಒಪ್ಪಿಗೆಯನ್ನು ನೀಡಿ.
v.ನಿಮ್ಮ ಮುಖವನ್ನು ಯಶಸ್ವಿಯಾಗಿ ಸ್ಕ್ಯಾನ್ ಮಾಡಿದ ನಂತರ, eKYC ಪೂರ್ಣಗೊಳ್ಳುವುದು.

**ಸೂಚನೆ:**

i. ಯಾವುದೇ ವಿಧಾನದ ಮೂಲಕ ಮಾಡಿದ eKYC ಯ ಸ್ಥಿತಿಯು 24 ಗಂಟೆಗಳ ನಂತರ ಫಲಾನುಭವಿಯ ಸ್ಥಿತಿಯಲ್ಲಿ ಪ್ರತಿಫಲಿಸುತ್ತದೆ.
ii.ರೈತರು PM-KISAN ಪೋರ್ಟಲ್ ಮತ್ತು Kisan-eMitra (PM-KISAN AI ಚಾಟ್‌ಬಾಟ್) ನಲ್ಲಿ KYS ಮಾಡ್ಯೂಲ್‌ನಿಂದ ತಮ್ಮ ಸ್ಥಿತಿಯನ್ನು ತಿಳಿಯಬಹುದು.